ಕಥೆ




## ಗುರುಪ್ರಸಾದ್ ಕಂಟಲಗೆರೆ

ಕಲೆ: ವೆಂಕಟರಮಣ ಭಟ್


# ಪೀರಕೆ ಸಾಹೇಬ್ರು ಮತ್ತು ತಿಮ್ಮಪ್ಪ ಮೇಷ್ಟ್ರು



ತಿಮ್ಮಪ್ಪ ಮೇಷ್ಟ್ರು ಇವತ್ತು ಬೆಳ ಬೆಳಗ್ಗೆ ಸ್ಪ್ಲೆಂಡರ್ ಗಾಡಿಲಿ ಬಂದವರೆ, ಗಾಡಿನ ಕಾಂಪೌಂಡ್ ಒಳಿಕೆ ನೂಕಿ ಆಫೀಸ್ ರೂಮ್ ಬೀಗ ತೆಗೆದವರೆ ಅಲ್ಲಿದ್ದ ಬಕೆಟ್ಟು ಚಂಬು ತಗಂಡು ಟಾಯ್ಲೆಟ್ ರೂಮ್ ಕಡೆಗೆ ನಡೆದರು. ಆಗಿನ್ನು ಒಂಬತ್ತುವರೆ ಆಗ್ತ ಬಂದದ್ರಿಂದ ಅಲ್ಲೊಂದು ಇಲ್ಲೊಂದು ಮಕ್ಳು ಬ್ಯಾಗ್ ನೇತಾಕ್ಯಂಡು ಬತ್ತಾ ಇದ್ದು. ಬೀಗದ ಶಿಬ್ರು ಗೊಂಚಲನ್ನ ಕೈನಲ್ಲೆ ಹಿಡ್ಕಂಡು ಬಂದಿದ್ರಿಂದ ಬಕೆಟನ್ನೂ ಚೊಂಬನ್ನೂ ಕೆಳಿಕಿಕ್ಕಿ ಒಂದಾದ ಮೇಲೊಂದು ಸಿಬ್ರುನ್ನ ಬೀಗದೊಳಿಕೆ ತುರುಕಿ ತಿರುಗ್ಸತೊಡಗಿದರು. ಕೆಲವು ಸರಾಗವಾಗಿ ಹೋಗಿ ಸುತ್ಕಂಡು ಬಂದ್ರೆ ಕೆಲವು ಒಳಿಕೇ ಹೋಗವಲ್ಲವು. ನಾಕಾರು ಕೀ ಇಕ್ಕಿರೂ ಟಾಯ್ಲೆಟ್ ರೂಮ್ ಬೀಗ ತೆಕ್ಕಳದಿದ್ದಾಗ 'ತಥ್' ಅಂತ ಸಿಟ್ಮಾಡ್ಕೆಂಡು ಕಾಂಪೌಂಡ್ ದಾರಿ ಕಡಿಕೆ ನೋಡಿದಾಗ, ಅದೆಲ್ಲಿದ್ನೊ ಐದನೇ ಕ್ಲಾಸ್ ಮಾನಿಟ್ರು ತೇಜ ಬ್ಯಾಗ್ ನೇತಾಕ್ಯಂಡು ಓಡೋಡಿ ಬತ್ತಿದ್ದ. ಮೇಷ್ಟ್ರ ಸಂಕಷ್ಟ ಅರಿತವನಂತೆ 'ಕೊಡಿ ಸಾ ಇಲ್ಲಿ ತಗಿತೀನಿ' ಅಂತ ಪರುಕ್ಕುನ ಕಿತ್ಕಂಡು ಒಂದು ಕೀನ ತಣಾರನ ಪತ್ತೆ ಹಚ್ಚಿ ನೂಕಿ ತೆಗೆದೇ ಬಿಟ್ಟ. ಬೀಗದ ಕಾಯ್ನ ತಂದುಕೊಟ್ಟರದು ತಿಮ್ಮಪ್ಪ ಮೇಷ್ಟ್ರೇ ಆದ್ರು ಅದನ್ನ ಬೆಳಗ್ಗೆ ಸಂಜೆ ಬೀಗ ಹಾಕದು ತೆಗೆಯದು ಮಾಡ್ತಿದ್ದು ಶಿಸ್ತಿನ ಸಿಪಾಯಿ ಮಾನಿಟ್ರು ತೇಜನೇ ಆಗಿದ್ದ. ಆದ್ರಿಂದ ಈ ಸ್ಕೂಲಿನ ಇಡೀ ಬಂಧೂಬಸ್ತಿನ ವಿಚಾರ ಬೇರೆಲ್ಲರಿಗಿಂತ ಚನ್ನಾಗಿ ಬಲ್ಲವನು ತೇಜನೇ ಆಗಿದ್ದ. ಈಗ ಮಿಡ್ಲಿಸ್ಕೂಲಿಗೆ ಹೋಗಿರುವ ಹೋದ ವರ್ಷದ ಮಾನಿಟ್ರು ಮಂಜನಿಂದ ಎಲ್ಲಾ ಆಡಳಿತಾತ್ಮಕ ವಿದ್ಯೆಗಳನ್ನು ಬಳುವಳಿಯಾಗಿ ಪಡೆದಿದ್ದ.

ತೇಜ ಟಾಯ್ಲೆಟ್ ರೂಮ್ ಬೀಗ ತೆಗೆದುಕೊಟ್ಟು ಉಳಿದ ಕೊಠಡಿಗಳ ಬೀಗ ತೆಗೆಯಲು ಹೋದ. ತಿಮ್ಮಪ್ಪ ಮೇಷ್ಟ್ರು ಎಷ್ಟೋ ದಿನದ ನಂತರ ಇದೇ ಮೊದಲ ಬಾರಿಗೆಂಬಂತೆ ಶೌಚಾಲಯದೊಳಿಕೆ ತಲೆ ಇಕ್ಕಿದರು. ತಲೆ ಇಕ್ಕ ತಕ್ಷಣ ಜೇಡರ